**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>**

**<u>ಎಂ ವಿ ಸಿ ನಂಃ / 1380/2023</u>**

ಹೆಸರು ◌ಃ ರಘು ಎಂ

ತಂದೆಯ ಹೆಸರು ◌ಃ ಮಾದೇಗೌಡ ಪಿ.ಡಬ್ಲ್ಯೂ : 3

ವಯಸ್ಸು ◌ಃ 33 ವರ್ಷ

ಉದ್ಯೋಗ ◌ಃ ಸಹಾಯಕ ಕಾರ್ಯಪಾಲಕ ಅಭಿಯಂತರರು,ಟಿ.ಕೆ.ಹಳ್ಳಿ

ವಾಸ ಸ್ಥಳ ◌ಃ ಟಿ.ಕೆ.ಹಳ್ಳಿ ಗ್ರಾಮ

ಸಾಕ್ಷಿಗೆ ದಿನಾಂಕಃ **03.07.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ಎನ್ ಕೆ ಎಸ್ ರವರಿಂದ .</u>**

ನಾನು 2021 ಸೆಪ್ಟೆಂಬರ್ ನಿಂದ ಮೇಲೆ ಹೇಳಿದ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನ್ಯಾಯಾಲಯದಿಂದ ನನಗೆ ನೋಟೀಸು ಬಂದಿದ್ದು, ಮೃತ ರವಿರವರ ವೇತನ ಪ್ರಮಾಣಪತ್ರವನ್ನು ಹಾಜರುಪಡಿಸುವಂತೆ ಆದೇಶಿಸಿದ ಮೇರೆಗೆ ನಾನು ಈ ದಿನ ವೇತನ ದೃಡೀಕರಣ ಪತ್ರವನ್ನು ಹಾಜರುಪಡಿಸುತ್ತಿದ್ದೇನೆ. ಸದರಿ ದಾಖಲೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ಸದರಿ ವೇತನ ಪ್ರಮಾಣಪತ್ರದ ಪ್ರಕಾರ ರವಿ ರವರ ಒಟ್ಟು ವೇತನ 45,551/- ರೂಗಳು ಅಗಿರುತ್ತದೆ. ಮೃತ ರವಿರವರು ನಮ್ಮ ಇಲಾಖೆಯಲ್ಲಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಃ ಶ್ರೀ ಕೆ.ಪಿ.ಕೆ. ವಕೀಲರಿಂದಃ</u>**

ನಿಪಿ-20 ಪೆಬ್ರವರಿ 2022 ಕ್ಕೆ ಸಂಬಂಧಿಸಿರುತ್ತದೆ. ಅಪಘಾತ ಅಗಿರುತ್ತದೆ ಎಂದು ಹೇಳುವ ದಿನದ 3 ತಿಂಗಳ ಪೂರ್ವದ ವೇತನ ಪ್ರಮಾಣಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಿಪಿ-20 ರಲ್ಲಿ ಇರುವ ಸಹಿ ನನ್ನದಾಗಿರುತ್ತದೆ. ಮೃತ ರವಿರವರು ನಮ್ಮ ಇಲಾಖೆಯಲ್ಲಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂಬ ಸಂಬಂದವಾಗಿ ಬೇರೆ ದಾಖಲೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಿಲು ಸೂಚಿಸಿದರೆ ನಾನು ಹಾಜರುಪಡಿಸಲು ತಯಾರು ಇರುತ್ತೇನೆ. ಅರ್ಜಿದಾರರಿಗೆ ಅನುಕೂಲವಾಗಲೀ ಎಯಿ ನಿಪಿ-20 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.